ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವನಹಳ್ಳಿ

**ಸಿ.ಸಿ. ಸಂಖ್ಯೆ-3255/2018**

ಪಿರ್ಯಾದಿದಾರರು : ಚಿಕ್ಕಜಾಲ ಪೋಲಿಸ್ ಠಾಣೆ

ವಿರುದ್ಧ

ಆರೋಪಿ : ರಾಜೇಶ್ ಗೋಪಿಲಾಲ್ ಮಖೀಜಾ

ದೋಷಾರೋಪಣೆ

ಶ್ರೀ. ಕೆಂಚನಗೌಡ ಪಾಟೀಲ, ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ. ಎಂ.ಎಫ್.ಸಿ ನ್ಯಾಯಾಲಯ, ದೇವನಹಳ್ಳಿ ಆದ ನಾನು ಆರೋಪಿಗಳಾದ

1. ರಾಜೇಶ್ ಗೋಪಿಲಾಲ್ ಮಖೀಜಾ ಬಿನ್ ಗೀಪಿಲಾಲ್ ಝುಮಾಲ್ ಮಖೀಜಾ,
2. ಅಶೋಕ್ ನವಾನಿ

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ಚಿಕ್ಕಜಾಲ ಪೋಲಿಸ್ ಠಾಣಾ ಸರಹದ್ದಿಗೆ ಸೇರಿದ ವಿ.ಐ.ಟಿ ಕ್ರಾಸ್ ಬಳಿ ಚಾಸಾ-3 ರವರು ಮೇಘಾ ಕ್ಯಾಬ್ ಕಂಪನಿಯ ಕಾರು ಚಾಲಕನಾಗಿದ್ದು ದಿನಾಂಕ. 12-04-2015 ರಂದು ರಾತ್ರಿ ಸುಮಾರು 11.30 ಗಂಟೆಯ ಸಮಯದಲ್ಲಿ ಕೆಎ-50-7269 ನಂಬರಿನ ಕಾರಿನಲ್ಲಿ ಬೆಂಗಳೂರಿನಿಂದ ಏರ್ ಪೋರ್ಟ್‌ಗೆ ಪ್ರಯಾಣೀಕರನ್ನು ಕರೆದುಕೊಂಡು ಬರುತ್ತಿದ್ದಾಗ ವಿ.ಐ.ಟಿ ಕ್ರಾಸ್ ಬಳಿ 2 ನೇ ಆರೋಪಿಯ ಕಂಪನಿಗೆ ಸೇರಿದ ಎಂಹೆಚ್ -04-ಡಿಕೆ-7713 ನಂಬರಿನ ಸಿಮೆಂಟ್ ಬಲ್ಕರ್ ಲಾರಿಯ ಚಾಲಕ ಅತಿವೇಗ ಮತ್ತು ಅಜಾಗರೂಕತೆಯಿಂದ ವಾಹನ ಚಲಾಯಿಸಿಕೊಂಡು ಬಂದು ಚಾಸಾ-3 ರವರು ಚಲಾಯಿಸುತ್ತಿದ್ದ ಕೆಎ-50-7269 ನಂಬರಿನ ಕಾರಿಗೆ ಗುದ್ದಿಸಿ ಅಪಘಾತ ಮಾಡಿದ್ದು, 1 ಮತ್ತು 2 ನೇ ಆರೋಪಿಗಳಾದ ನೀವುಗಳು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 2 ನೇ ಆರೋಪಿಯ ಕಂಪನಿಗೆ ಸೇರಿದ ಎಂಹೆಚ್ -04- ಡಿಕೆ -7713 ನಂಬರಿನ ಸಿಮೆಂಟ್ ಬಲ್ಕರ್ ಲಾರಿಯ ವಿಮಾಪಾಲಸಿ ಅಪಘಾತ ನಡೆದ ದಿನಾಂಕ. 12- 04-2015 ಕ್ಕೆ ಚಾಲ್ತಿಯಲ್ಲಿ ಇಲ್ಲದೇ ಇದ್ದರೂ ಸಹ ಮೋಸ ಮಾಡುವ ಉದ್ದೇಶದಿಂದ 2 ನೇ ಆರೋಪಿಯು ಅದು ಚಾಲ್ತಿಯಲ್ಲಿರುತ್ತದೆಂದು ತಿದ್ದುಪಡಿ ಮಾಡಿ, 1 ನೇ ಆರೋಪಿಯಾದ ನೀವು ಮೇಲ್ ಮುಖಾಂತರ ಕಳುಹಿಸಿಕೊಟ್ಟಿದ್ದು, ಸದರಿ ನಕಲಿ ಇನ್ಸುರೆನ್ಸ್ ಪ್ರತಿಯನ್ನು ದಿನಾಂಕ. 14-04-2015 ರಂದು ಚಾಸಾ-1 ರವರ ಮುಂದೆ ಹಾಜರುಪಡಿಸಿ ಅಪಘಾತಕ್ಕೆ ಒಳಪಟ್ಟ ಎಂಹೆಚ್ -04 -ಡಿಕೆ - 7713 ನಂಬರಿನ ಸ್ಮಿಮೆಂಟ್ ಬಲ್ಕರ್ ಲಾರಿಯನ್ನು ತನ್ನ ವಶಕ್ಕೆ ಬಿಡುಗಡೆಮಾಡಿಸಿಕೊಂಡು ಚಾಸಾ-2 ರವರ ಇನ್ಸುರೆನ್ಸ್ ಕಂಪನಿ ಮತ್ತು ಸರ್ಕಾರಕ್ಕೆ ಮೋಸಮಾಡಿರುತ್ತೀರಿ. ಆ ಮೂಲಕ ಭಾ.ದಂ.ಸಂ. ಕಲಂ.420, 465, 467, 468,

471 ಸಹವಾಚಕ ಕಲಂ 34 ರ ರೀತ್ಯಾ ಶಿಕ್ಷಾರ್ಹ ಅಪರಾಧವನ್ನು ಈ ನ್ಯಾಯಾಲಯದ ಸಂಜ್ಞಾನದಲ್ಲಿ ಎಸಗಿರುತ್ತೀರಿ ಎಂದು ದೋಷಿಸಿದೆ.

ಆದುದರಿಂದ ಆರೋಪಿತರಾದ ನಿಮ್ಮ ವಿರುದ್ಧ ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕಂದು ನಿರ್ದೇಶಿದ್ದೇನೆ.

ಆದುದರಿಂದ ಆರೋಪಿತರಾದ ನಿಮ್ಮ ವಿರುದ್ಧ ಮೇಲ್ಕಂಡ ಅಪರಾಧಕ್ಕಾಗಿ ಈ ನ್ಯಾಯಾಲಯದಲ್ಲಿ ವಿಚಾರಣೆಯಾಗಬೇಕಂದು ನಿರ್ದೇಶಿದ್ದೇನೆ.

**ಪ್ರಶ್ನೆ-1:** ಆರೋಪಿಯಾದ ನೀವು ಮೇಲೆ ಹೇಳಿದ ದೋಷಾರೋಪಣೆಯನ್ನು ಕೇಳಿದ್ದಿರಾ?

ಉತ್ತರ: ಎ1 .

ಎ2.

**ಪ್ರಶ್ನೆ-2** ಆರೋಪಿಯಾದ ನೀವು ಸದರಿ ದೋಷಾರೋಪಣೆಯನ್ನು ಒಪ್ಪಿಕೊಳ್ಳುತ್ತೀಯಾ ಅಥವಾ ವಿಚಾರಣೆಯಾಗಬೇಕೆಂದು ಬಯಸುತ್ತಿರಾ?

ಉತ್ತರಃ ಎ1.

ಎ2.

ಈ ಮೇಲೆ ಹೇಳಿದ ದೋಪಾರೋಪಣೆಯನು ಆರೋಪಿತರಿಗೆ ತಿಳಿಯುವ ಭಾಷೆಯಲ್ಲಿ ಅವರಿಗೆ ಅರ್ಥವಾಗುವಂತೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಬಹಿರಂಗ ನ್ಯಾಯಾಲಯದಲ್ಲಿ ಯಥಾವತ್ತಾಗಿ ದಾಖಲು ಮಾಡಿಕೊಂಡಿರುತ್ತೇನೆ.

ದಿನಾಂಕಃ 21-03-2023

(ಶ್ರೀ. ಕೆಂಚನಗೌಡ ಪಾಟೀಲ)
2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ, ದೇವನಹಳ್ಳಿ